# ೯ ಮೇಡಂ ಕಾಮಾ




ಮೇಡಂ ಕಾಮಾ ಒಬ್ಬ ಕ್ರಾಂತಿಕಾರಿಣಿ. ಖಡ್ಗ ಹಿಡಿದು ಯುದ್ಧ ಮಾಡುವುದು ಒಂದು ಬಗೆಯ ಸಾಹಸವಾದರೆ. ಅನ್ಯಾಯವನ್ನು ಪ್ರತಿಭಟಿಸುವುದೂ ಒಂದು ಸಾಹಸವೇ. ವಿಶೇಷ ಸಂದರ್ಭ ಸನ್ನಿವೇಶಗಳಲ್ಲಿ ಬಂಡೆದ್ದು ಹೋರಾಡಿದವರಲ್ಲಿ ಮೇಡಂ ಕಾಮಾ ಒಬ್ಬರು.

ಮುಂಬಯಿಯಲ್ಲಿ ೨೪ ಸಪ್ಟೆಂಬರ ೧೮೬೧ ರಂದು ಕಾಮಾ ಜನಿಸಿದಳು. ಕಾಮಾ ಮುಂಬಯಿಯ ಪಾರ್ಸಿ ಬಾಲಕಿಯರ ಶಾಲೆಯಲ್ಲಿ ಓದಿದಳು. ಅವಳು ಚಿಕ್ಕಂದಿನಲ್ಲಿಯೇ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಿದಳು. ದೇಶಕ್ಕಾಗಿ ಬಲಿದಾನ ಮಾಡಿದ ಹುತಾತ್ಮರನ್ನು ಅಭಿಮಾನದಿಂದ ಗೌರವಿಸುತ್ತಿದ್ದಳು. ಅವಳು ಬೆಳೆಯುತ್ತಲೇ ಭಾರತ ಸ್ವಾತಂತ್ರ್ಯದ ಕನಸು ಕಾಣುತ್ತಿದ್ದಳು. ಅನೇಕ ದೇಶಭಕ್ತರ ಪರಿಚಯ ಮಾಡಿಕೊಂಡಳು. ಮಹಾನ್ ದೇಶಭಕ್ತ ದಾದಾಭಾಯಿ ನವರೋಜಿಯವರ ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದಳು.

೧೯೦೭ರ ಅಗಷ್ಟನಲ್ಲಿ ಜರ್ಮನಿಯ ಸ್ಟುಟ್‌ಗರ್ಟ ಎಂಬಲ್ಲಿ ಒಮ್ಮೆ ಸಮ್ಮೇಳನ ಜರುಗಿತು. ಅಲ್ಲಿ ಪ್ರಪಂಚದ ಹಲವು ರಾಷ್ಟ್ರಗಳಿಂದ ಪ್ರತಿನಿಧಿಗಳು ಆಗಮಿಸಿದ್ದರು. ಒಂದೊಂದು ದೇಶದ ಪ್ರತಿನಿಧಿಗಳು ವೇದಿಕೆಯ ಮೇಲೆ ಕಾಣಿಸಿಕೊಳ್ಳುತ್ತಿದ್ದರು. ಭಾರತದ ಹೆಸರು ಬಂದಾಗ ಕಾಮಾ ವೇದಿಕೆ ಹತ್ತಿ ಮಾತನಾಡಿದಳು. ಆ ಮಾತು ಎಲ್ಲರ ಗಮನಸೆಳೆಯಿತು.

ಕಾಮಾ ಮಾತನಾಡಿ, ''ಭಾರತ ದಾಸ್ಯದಲ್ಲಿದೆ. ಜಗತ್ತಿನ ಸ್ವಾತಂತ್ರ ಪ್ರೇಮಿಗಳೆ ಎಲ್ಲರೂ ಭಾರತವನ್ನು ದಾಸ್ಯದಿಂದ ಮುಕ್ತಗೊಳಿಸಲು ಸಹಕರಿಸಬೇಕು.'' ಎಂದು ಮನವಿಮಾಡಿದಳು. ಅಲ್ಲದೇ ಭಾರತವನ್ನೇ ಲೂಟಿ ಮಾಡುತ್ತಿದೆ ಎಂದು ಬ್ರಿಟಿಷ್ ಸರ್ಕಾರವನ್ನು ಖಂಡಿಸಿದಳು. ತನ್ನ ಭಾಷಣದ ಕೊನೆಯಲ್ಲಿ ಧೈರ್ಯದಿಂದ ಭಾರತೀಯ ಧ್ವಜವನ್ನು ಬಿಚ್ಚಿಹಾರಿಸುತ್ತ ''ಇದೋ ನೋಡಿ, ನಮ್ಮ ಈ ಧ್ವಜ ಭಾರತದ ಸ್ವಾತಂತ್ರ್ಯದ ಕುರುಹು. ಭಾರತೀಯ ರೆಲ್ಲರಿಗೂ ಈ ಬಾವುಟ ಪವಿತ್ರ. ತಾವೆಲ್ಲ ಭಾರತದ ವಿಮೋಚನೆಗಾಗಿ ನೆರವಾಗಬೇಕು.'' ಎಂದು ಪ್ರಾರ್ಥಿಸಿದಳು.

ಹೊರದೇಶದಲ್ಲಿ ಬೇರೆ ಬೇರೆ ರಾಷ್ಟ್ರಗಳ ಪ್ರತಿನಿಧಿಗಳ ಸಮ್ಮುಖದಲ್ಲಿ ಮೊಟ್ಟಮೊದಲಿಗೆ ಭಾರತದ ಧ್ವಜವನ್ನು ಹಾರಿಸಿದ ದಿಟ್ಟ ಮಹಿಳೆ ಎಂದು ಸಭಿಕರು ಅವಳನ್ನು ಕೊಂಡಾಡಿದರು. ಎಲ್ಲರೂ ಎದ್ದು ನಿಂತು ಧ್ವಜಕ್ಕೆ ವಂದನೆ ಸಲ್ಲಿಸಿದರು.

ಈ ತ್ರಿವರ್ಣ ಧ್ವಜವನ್ನು ಕ್ರಾಂತಿಕಾರಿ ಹೋರಾಟಗಾರ ವೀರ ಸಾವರಕರ, ಕಾಮಾ ಮತ್ತಿತರ ದೇಶಭಕ್ತರು ಸೇರಿ ೧೯೦೫ ರಲ್ಲಿ ರಚಿಸಿದರು. ಇದು ಭಾರತದ ಮೊದಲ ಧ್ವಜವಾಗಿತ್ತು. ಅದು ಹಸಿರು, ಕೇಸರಿ ಮತ್ತು ಕೆಂಪುಬಣ್ಣಗಳಿಂದ ಕೂಡಿದ್ದು ನಡುವೆ ''ವಂದೇ ಮಾತರಂ'' ಎಂದು ಬರೆಯಲಾಗಿತ್ತು.

ಜರ್ಮನ್, ಅಮೇರಿಕಾ, ಫ್ರಾನ್ಸ ಮುಂತಾದ ಪ್ರಮುಖ ರಾಷ್ಟ್ರಗಳನ್ನು ಸುತ್ತಾಡಿ ಬ್ರಿಟಿಷ್ ಸರಕಾರದ ದಬ್ಬಾಳಿಕೆಯನ್ನು ಖಂಡಿಸಿ ಭಾಷಣ ಮಾಡುತ್ತಿದ್ದಳು. ಅಲ್ಲಿದ್ದ ಭಾರತೀಯರಲ್ಲಿ ಸ್ವಾತಂತ್ರ್ಯದ ಪ್ರೇಮ ಹುಟ್ಟಿಸುವುದೇ ಅವಳ ಉದ್ದೇಶವಾಗಿತ್ತು. ಕಾಮಾಳ ಈ ಚಟುವಟಿಕೆಗಳನ್ನು ಕಂಡು ಬ್ರಿಟೀಷ್ ಸರಕಾರವು ರೊಚ್ಚಿಗೆದ್ದು ಅವಳು ಭಾರತದಲ್ಲಿ ಕಾಲಿಡದಂತೆ ನಿರ್ಬಂಧನೆ ಹಾಕಿತು. ಹೀಗಾಗಿ ಕಾಮಾ ಮೂವತ್ತೈದು ವರ್ಷಗಳನ್ನು ಫ್ರಾನ್ಸಿನಲ್ಲಿಯೇ ಕಳೆಯಬೇಕಾಯಿತು.

ಮೇಡಂ ಕಾಮಾ ಭಾರತಕ್ಕೆ ಬರದಿದ್ದರೂ ಅವಳ ಪ್ರಭಾವ ಭಾರತದ ಮೇಲಿತ್ತು. ಕಾಮಾಳನ್ನು ಗಡಿಪಾರು ಮಾಡಿದುದರ ವಿರುದ್ಧ ಜನ ದಂಗೆ ಎದ್ದರು. ಬ್ರಿಟಿಷ ಸರಕಾರವು ಕಾಮಾಳ ವಿರುದ್ಧ ಹಾಕುತ್ತಿರುವ ನಿರ್ಬಂಧನೆಗಳನ್ನು ಖಂಡಿಸಿದರು.

೧೯೧೪ ರಲ್ಲಿ ಮೊದಲನೆಯ ಜಾಗತಿಕ ಮಹಾಯುದ್ಧ ಆರಂಭವಾಯಿತು. ಇದರಿಂದ ಕಾಮಾಳ ಸ್ವಾತಂತ್ರ್ಯ ಹೋರಾಟಕ್ಕೆ ಬಲ ಬಂದಿತು. ಅವಳು ಯುದ್ಧ ದಲ್ಲಿ ಭಾರತೀಯ ಸೈನಿಕರನ್ನು ಹುರಿದುಂಬಿಸಿದಳು.

''ನಾನು ಭಾರತಕ್ಕೆ ಮರಳಿ ಬರಬೇಕು, ನನ್ನ ದೇಶದಲ್ಲಿ ಕೊನೆಯ ದಿನಗಳನ್ನು ಕಳೆಯಬೇಕು'' ಎಂದು ಬ್ರಿಟಿಷ್ ಸರಕಾರಕ್ಕೆ ಮನವಿಸಲ್ಲಿಸಿದಳು. ಅದಕ್ಕೆ ಸರಕಾರವು 'ಕಾಮಾ ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸಬಾರದು'' ಎಂಬ ಷರತ್ತಿನ ಮೇಲೆ ಒಪ್ಪಿಗೆ ನೀಡಿತು. ಈ ಷರತ್ತಿಗೆ ಕಾಮಾಳ ಮನಸ್ಸು ಒಪ್ಪದಿದ್ದರೂ ಬಂಧುಗಳ ಒತ್ತಾಯದಿಂದ ಒಪ್ಪಿಕೊಂಡಳು. ತನ್ನ ಎಪ್ಪತ್ತರ ಇಳಿವಯಸ್ಸಿನಲ್ಲಿ ಕಾಮಾ ತನ್ನ ತಾಯ್ನಾಡಿಗೆ ಮರಳಿಬಂದಳು. ಭಾರತಕ್ಕೆ ಬಂದರೂ ಕಾಮಾ ಮನೆಗೆ ಬರಲಿಲ್ಲ, ಅನಾರೋಗ್ಯದಿಂದ ಅವಳು ಆಸ್ಪತ್ರೆ ಸೇರಬೇಕಾಯಿತು. ೧೩ ಅಗಸ್ಟ ೧೯೩೬ ರಂದು ಕಾಮಾ ಆಸ್ಪತ್ರೆಯಲ್ಲಿಯೇ ತೀರಿಕೊಂಡಳು.

ಕಾಮಾ ವಿದೇಶಗಳಲ್ಲಿ ಭಾರತದ ಸ್ವಾತಂತ್ರ್ಯದ ಕಹಳೆ ಮೊಳಗಿಸಿದ ವೀರ ನಾರಿ. ಅವಳ ರಕ್ತದ ಕಣಕಣದಲ್ಲೂ ಸ್ವಾತಂತ್ರ್ಯದ ದಾಹ ಅಡಗಿತ್ತು. ೧೧ ವರ್ಷಗಳ ನಂತರ ಕಾಮಾಳ ಆಸೆ ನೆರವೇರಿತು. ೧೫ ಅಗಸ್ಟ ೧೯೪೭ ರಂದು ಭಾರತಕ್ಕೆ ಸ್ವಾತಂತ್ರ್ಯ ದೊರೆಯಿತು.

– ಆರ್.ಡಿ.ಜಿ

**ಶಬ್ದಗಳ ಅರ್ಥ**

ಪ್ರತಿಭಟಿಸು – ವಿರೋಧಿಸು; ಹುತಾತ್ಮ – ದೇಶಕ್ಕಾಗಿ ಪ್ರಾಣ ತ್ಯಾಗ ಮಾಡಿದವ; ಗಮನ – ಲಕ್ಷ್ಯ; ಮುಕ್ತ – ಬಿಡುಗಡೆ, ವಿಮೋಚನೆ; ಬಾವುಟ – ಧ್ವಜ;

***ಶಬ್ದಕೋಶದ ಸಹಾಯದಿಂದ ಕೆಳಗಿನ ಶಬ್ದಗಳ ಸಾಂದರ್ಭಿಕ ಅರ್ಥವನ್ನು ಹುಡುಕಿ ಬರೆಯಿರಿ.**

ಕೊಂಡಾಡು ________ ; ದಬ್ಬಾಳಿಕೆ ________ ; ನಿರ್ಬಂಧನೆ ________ ; ಷರತ್ತು ________

## ಅಭ್ಯಾಸ

**ಪ್ರಶ್ನೆ ೧) ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಕಾಮಾ ಚಿಕ್ಕಂದಿನಲ್ಲಿ ಏನು ಮಾಡುತ್ತಿದ್ದಳು ?

________________________________

ಆ) ಜರ್ಮನ್ ಸಮ್ಮೇಳನದಲ್ಲಿ ಕಾಮಾ ಏನೆಂದು ಮನವಿಮಾಡಿದಳು ?

________________________________

ಇ) ಬ್ರಿಟಿಷ ಸರಕಾರವು ಕಾಮಾಳ ಮೇಲೆ ಏಕೆ ನಿರ್ಬಂಧನೆ ಹಾಕಿತು ?

________________________________

**ಪ್ರಶ್ನೆ ೨) ಒಂದೇ ವಾಕ್ಯದಲ್ಲಿ ಉತ್ತರ ಬರುವಂತೆ ಎರಡು ಪ್ರಶ್ನೆಗಳನ್ನು ರಚಿಸಿ ಉತ್ತರ ಬರೆಯಿರಿ.**

**ಅ)** ________________

**ಉತ್ತರ** ________________

**ಆ)** ________________

**ಉತ್ತರ** ________________

**ಪ್ರಶ್ನೆ ೩) ಹೊಂದಿಸಿ ಬರೆಯಿರಿ.**

| 'ಅ' ಗುಂಪು | | 'ಬ' ಗುಂಪು |
|---|---|---|
| ೧) ೧೮೬೧ | | (ಅ) ಮೊದಲ ಜಾಗತಿಕ ಯುದ್ಧ |
| ೨) ಜರ್ಮನಿ | | (ಆ) ಧ್ವಜ |
| ೩) ತ್ರಿವರ್ಣ | | (ಇ) ಕಾಮಾಳ ಜನನ |
| ೪) ೧೯೪೭ | | (ಈ) ಭಾರತಕೆ ಸ್ವಾತಂತ್ರ್ಯ ದೊರೆಯಿತು. |
| ೫) ೧೯೧೪ | | (ಉ) ಸ್ಟುಟ್‌ಗರ್ಟ |

**ಪ್ರಶ್ನೆ ೪) ಬಿಟ್ಟ ಸ್ಥಳ ತುಂಬಿರಿ.**

ಅ) ಮೇಡಂ ಕಾಮಾ ಒಬ್ಬ ..................

ಆ) ಮಹಾನ ದೇಶಭಕ್ತ .................. ಆಪ್ತ ಕಾರ್ಯದರ್ಶಿಯಾಗಿ ಸೇವೆ ಸಲ್ಲಿಸಿದಳು.

ಇ) .................. ಅಗಷ್ಟನಲ್ಲಿ ಜರ್ಮನಿಯ ಸ್ಟುಟ್‌ಗರ್ಟ ಸಮ್ಮೇಳನ ಜರುಗಿತು.

ಈ) ಭಾರತೀಯರೆಲ್ಲರಿಗೂ ಈ ಬಾವುಟ ..................

ಉ) ಅವಳು .................. ಭಾರತೀಯ ಸೈನಿಕರನ್ನು ಹುರಿದುಂಬಿಸಿದರು.

ಊ) ಕಾಮಾ ದೇಶ ವಿದೇಶಗಳಲ್ಲಿ .................. ಕಹಳೆ ಮೊಳಗಿಸಿದ ವೀರಮಹಿಳೆ.

**ಉಪಕ್ರಮ :** ಭಾರತದ ರಾಷ್ಟ್ರಧ್ವಜದ ವೈಶಿಷ್ಟ್ಯಗಳ ಬಗ್ಗೆ ಪಾಲಕರಿಂದ/ಶಿಕ್ಷಕರಿಂದ ಕೇಳಿ ತಿಳಿದುಕೊಳ್ಳಿರಿ.

## ರಾಷ್ಟ್ರಭಕ್ತಿ ಜೀವಶಕ್ತಿ

